Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**

( ವಿಶೇಷ ಸಂಚಿಕೆ )

**भाग IX** **अनुभाग 1**

**PART IX** **SECTION 1**

**ಭಾಗ IX** **ವಿಭಾಗ 1**

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, शुक्रवार, एप्रील ६, २०१२ | वैशाक १७, १९३४ (शाका) | खंड. ४८ |
| No. 1 | New Delhi, Friday, April 6, 2012 | Vaishakha 17, 1934 (Saka) | Vol. 48 |
| ಸಂ. ೧ | ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ | ವೈಶಾಖ ೧೭, ೧೯೩೪ (ಶಕ) | ಸಂಪುಟ. ೪೮ |


**Ministry of Law and Justice**
(Legislative Department)
New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 - ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009

(2009ರ ಅಧಿನಿಯಮ ಸಂಖ್ಯೆ 35)

The Right of Children to Free and Compulsory Education Act, 2009

[26ನೇ ಆಗಸ್ಟ್, 2009]

ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಸರ್ಕಾರ" ಎಂದರೆ,–

(i) ಕೇಂದ್ರ ಸರ್ಕಾರವು ಅಥವಾ ವಿಧಾನ ಮಂಡಲವನ್ನು ಹೊಂದಿಲ್ಲದ ಒಕ್ಕೂಟ ರಾಜ್ಯ ಕ್ಷೇತ್ರದ ಆಡಳಿತಗಾರನು ಸ್ಥಾಪಿಸಿದ, ಅದರ ಒಡೆತನ ಅಥವಾ ನಿಯಂತ್ರಣ ಹೊಂದಿರುವ ಶಾಲೆಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ;

(ii) (i)ನೇ ಉಪ–ಖಂಡದಲ್ಲಿ ಉಲ್ಲೇಖಿಸಿದ ಶಾಲೆಯನ್ನು ಹೊರತುಪಡಿಸಿ,–

(ಎ) ಒಂದು ರಾಜ್ಯದ ರಾಜ್ಯಕ್ಷೇತ್ರದೊಳಗೆ ಸ್ಥಾಪಿಸಿದ ಶಾಲೆಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರ;

(ಬಿ) ವಿಧಾನಮಂಡಲವನ್ನು ಹೊಂದಿರುವ ಒಕ್ಕೂಟ ರಾಜ್ಯ ಕ್ಷೇತ್ರದೊಳಗೆ ಸ್ಥಾಪಿಸಿದ ಶಾಲೆಗೆ ಸಂಬಂಧಿಸಿದಂತೆ ಆ ಒಕ್ಕೂಟ ರಾಜ್ಯಕ್ಷೇತ್ರದ ಸರ್ಕಾರ;

(ಬಿ) "ಕ್ಯಾಪಿಟೇಶನ್ ಫೀಜು" ಎಂದರೆ ಶಾಲೆಯು ಅಧಿಸೂಚಿಸಿದ ಫೀಜನ್ನು ಹೊರತುಪಡಿಸಿ, ಯಾವುದೇ ರೀತಿಯ ದೇಣಿಗೆ ಅಥವಾ ವಂತಿಗೆ ಅಥವಾ ಹಣಸಂದಾಯ;

(ಸಿ) "ಮಗು" ಎಂದರೆ ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಗಂಡು ಅಥವಾ ಹೆಣ್ಣು ಮಗು;

(ಡಿ) "ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗು" ಎಂದರೆ ಅನುಸೂಚಿತ ಜಾತಿಗೆ, ಅನುಸೂಚಿತ ಬುಡಕಟ್ಟಿಗೆ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಕ್ಕೆ ಅಥವಾ ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಿಕ, ಲಿಂಗ ಅಥವಾ ಅಂಥ ಇತರ ಸಂಗತಿಯ ಕಾರಣದಿಂದಾಗಿ ಅನುಕೂಲ ವಂಚಿತವಾದ ಇತರ ಗುಂಪಿಗೆ ಸೇರಿದ ಮಗು;

(ಇ) "ದುರ್ಬಲ ವರ್ಗಕ್ಕೆ ಸೇರಿದ ಮಗು" ಎಂದರೆ ಯಾವ ತಂದೆ ತಾಯಿಯರ ಅಥವಾ ಪೋಷಕರ ವಾರ್ಷಿಕ ಆದಾಯವು ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಿದ ಕನಿಷ್ಠ ಮಿತಿಗಿಂತ ಕಡಿಮೆಯಿರುವುದೋ ಅಂಥ ತಂದೆ ತಾಯಿಗೆ ಅಥವಾ ಪೋಷಕರಿಗೆ ಸೇರಿದ ಮಗು;

(ಎಫ್)"ಪ್ರಾಥಮಿಕ ಶಿಕ್ಷಣ" ಎಂದರೆ ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗಿನ ಶಿಕ್ಷಣ;

(ಜಿ) ಒಂದು ಮಗುವಿಗೆ ಸಂಬಂಧಿಸಿದಂತೆ, "ಪೋಷಕ" ಎಂದರೆ ಆ ಮಗುವಿನ ಪಾಲನೆ ಪೋಷಣೆ ಮಾಡುತ್ತಿರುವ ಮತ್ತು ಅದರ ಅಭಿರಕ್ಷೆ ಹೊಂದಿರುವ ವ್ಯಕ್ತಿ ಹಾಗೂ ಇದರಲ್ಲಿ ಸಹಜ ಪೋಷಕನು ಅಥವಾ ನ್ಯಾಯಾಲಯದಿಂದ ಅಥವಾ ಒಂದು ಶಾಸನದ ಮೂಲಕ ನೇಮಕಗೊಂಡ ಅಥವಾ ಘೋಷಿಸಲ್ಪಟ್ಟ ಪೋಷಕನೂ ಸೇರುತ್ತಾನೆ;

(ಎಚ್) "ಸ್ಥಳೀಯ ಪ್ರಾಧಿಕಾರ" ಎಂದರೆ ಯಾವುದೇ ಹೆಸರಿನಿಂದ ಕರೆಯಲಾಗುವ ಪೌರಸಭಾ ನಿಗಮ ಅಥವಾ ಪುರಸಭೆ ಅಥವಾ ಜಿಲ್ಲಾ ಪರಿಷತ್ತು ಅಥವಾ ನಗರ ಪಂಚಾಯಿತಿ ಅಥವಾ ಪಂಚಾಯಿತಿ ಮತ್ತು ಅದು ಶಾಲೆಯ ಮೇಲೆ ಆಡಳಿತ ನಿಯಂತ್ರಣವನ್ನು ಹೊಂದಿರುವ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಯಾವುದೇ ನಗರದಲ್ಲಿ, ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಸ್ಥಳೀಯ ಪ್ರಾಧಿಕಾರವಾಗಿ ಕಾರ್ಯ ನಿರ್ವಹಿಸಲು ಅಧಿಕಾರ ಹೊಂದಿರುವಂಥ ಇತರ ಪ್ರಾಧಿಕಾರವನ್ನು ಅಥವಾ ನಿಕಾಯವನ್ನು ಒಳಗೊಳ್ಳುತ್ತದೆ;

(ಐ) " ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ" ಎಂದರೆ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ;

(ಜೆ) "ಅಧಿಸೂಚನೆ" ಎಂದರೆ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಕೆ) "ತಂದೆ – ತಾಯಿ" ಎಂದರೆ ಮಗುವಿನ ಹೆತ್ತ ತಂದೆ ಅಥವಾ ತಾಯಿ ಅಥವಾ ಮಲ ತಂದೆ ಅಥವಾ ಮಲತಾಯಿ ಅಥವಾ ದತ್ತಕ ತಂದೆ ಅಥವಾ ದತ್ತಕ ತಾಯಿ;

(ಎಲ್) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಅನುಸೂಚಿ" ಎಂದರೆ ಈ ಅಧಿನಿಯಮಕ್ಕೆ ಅನುಬಂಧಿಸಿದ ಅನುಸೂಚಿ;

(ಎನ್) "ಶಾಲೆ" ಎಂದರೆ ಪ್ರಾಥಮಿಕ ಶಿಕ್ಷಣ ನೀಡುತ್ತಿರುವ, ಮಾನ್ಯತೆ ಪಡೆದ ಯಾವುದೇ ಶಾಲೆ ಮತ್ತು, ಇದರಲ್ಲಿ,–

(i) ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿತವಾದ, ಅದರ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಶಾಲೆ;

(ii) ತನ್ನ ಇಡೀ ಅಥವಾ ಭಾಗಶಃ ವೆಚ್ಚಗಳನ್ನು ಭರಿಸಲು ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಹಣಕಾಸು ನೆರವನ್ನು ಅಥವಾ ಅನುದಾನಗಳನ್ನು ಪಡೆಯುತ್ತಿರುವ ಅನುದಾನಿತ ಶಾಲೆ; ಮತ್ತು

(iii) ನಿರ್ದಿಷ್ಟಪಡಿಸಿದ ಪ್ರವರ್ಗಕ್ಕೆ ಸೇರಿದ ಶಾಲೆ; ಮತ್ತು

(iv) ತನ್ನ ವೆಚ್ಚಗಳನ್ನು ಭರಿಸಲು ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಯಾವುದೇ ರೀತಿಯ ಹಣಕಾಸು ನೆರವನ್ನು ಅಥವಾ ಅನುದಾನಗಳನ್ನು ಪಡೆಯುತ್ತಿಲ್ಲದ ಅನುದಾನರಹಿತ ಶಾಲೆ

– ಒಳಗೊಳ್ಳುತ್ತದೆ;

(ಓ) "ಪರಿಶೀಲನಾ ಪ್ರಕ್ರಿಯೆ" ಎಂದರೆ ಮಗುವಿಗೆ ಪ್ರವೇಶ ನೀಡುವುದಕ್ಕಾಗಿ ನಿರ್ದಿಷ್ಟ ಅನಿಶ್ಚಿತ ಪದ್ಧತಿಯನ್ನು ಹೊರತುಪಡಿಸಿ, ಒಂದು ಮಗುವಿಗೆ ಇನ್ನೊಂದು ಮಗುವಿಗಿಂತ ಆದ್ಯತೆ ನೀಡುವ ಆಯ್ಕೆ ವಿಧಾನ;

(ಪಿ) ಶಾಲೆಗೆ ಸಂಬಂಧಿಸಿದಂತೆ "ನಿರ್ದಿಷ್ಟಪಡಿಸಿದ ಪ್ರವರ್ಗ" ಎಂದರೆ ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ, ಸೈನಿಕ ಶಾಲೆ ಎಂಬ ಹೆಸರಿನ ಶಾಲೆ ಅಥವಾ ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿಭಿನ್ನ ವೈಶಿಷ್ಟ ಹೊಂದಿರುವ ಅಂಥ ಯಾವುದೇ ಇತರ ಶಾಲೆ;

(ಕ್ಯೂ) " ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ" ಎಂದರೆ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ 3ನೇ ಪ್ರಕರಣದ ಮೇರೆಗೆ ರಚಿಸಲಾದ ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗ.

## ಅಧ್ಯಾಯ – II

## ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಹಕ್ಕು

3. **ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಗುವಿನ ಹಕ್ಕು.**– (1) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವು ಹತ್ತಿರದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳ್ಳುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಹಕ್ಕು ಹೊಂದಿರತಕ್ಕದ್ದು.

(2) (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ, ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ಮತ್ತು ಪೂರ್ಣಗೊಳಿಸಲು ಮಗುವಿಗೆ ಅಡ್ಡಿಯುಂಟು ಮಾಡಬಹುದಾದ ಯಾವುದೇ ಬಗೆಯ ಫೀಜನ್ನು ಅಥವಾ ಚಾರ್ಜುಗಳನ್ನು ಅಥವಾ ವೆಚ್ಚಗಳನ್ನು ಸಂದಾಯ ಮಾಡುವುದಕ್ಕೆ ಯಾವುದೇ ಮಗುವು ಬದ್ಧವಾಗಿರತಕ್ಕದ್ದಲ್ಲ:

ಪರಂತು, ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1996 (1996ರ 1) ರ 2ನೇ ಪ್ರಕರಣದ (1) ನೇ ಖಂಡದಲ್ಲಿ ಪರಿಭಾಷಿಸಿರುವಂತೆ ಅಂಗವಿಕಲತೆ ಹೊಂದಿರುವ ಮಗುವು ಸದರಿ ಅಧಿನಿಯಮದ Vನೇ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.

4. **ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸಿರದ ಅಥವಾ ಅದನ್ನು ಪೂರ್ಣಗೊಳಿಸಿರದ ಮಕ್ಕಳಿಗಾಗಿ ವಿಶೇಷ ಉಪಬಂಧಗಳು.–** ಆರು ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಮಗುವನ್ನು ಯಾವುದೇ ಶಾಲೆಗೆ ಸೇರಿಸದೇ ಇರುವಲ್ಲಿ ಅಥವಾ ಸೇರಿಸಿದ್ದರೂ ಅವನು ಅಥವಾ ಅವಳು ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲಾಗದಿದ್ದಾಗ, ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ಅವನನ್ನು ಅಥವಾ ಅವಳನ್ನು ಸೇರಿಸಿಕೊಳ್ಳತಕ್ಕದ್ದು:

ಪರಂತು, ಮಗುವನ್ನು ಅವನ ಅಥವಾ ಅವಳ ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ನೇರವಾಗಿ ಸೇರಿಸಿಕೊಂಡಿರುವಲ್ಲಿ ಆ ಮಗುವನ್ನು ಕಲಿಕೆಯಲ್ಲಿ ಸಹಪಾಠಿಗಳ ಸಮಕ್ಕೆ ತರುವ ಸಲುವಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲಮಿತಿಯೊಳಗೆ ವಿಶೇಷ ತರಬೇತಿ ಪಡೆಯುವ ಹಕ್ಕನ್ನು ಅದು ಹೊಂದಿರತಕ್ಕದ್ದು:

ಮತ್ತೂ ಪರಂತು, ಪ್ರಾಥಮಿಕ ಶಿಕ್ಷಣಕ್ಕಾಗಿ ಹಾಗೆ ಸೇರಿಸಲಾದ ಮಗುವು ಹದಿನಾಲ್ಕು ವರ್ಷ ವಯಸ್ಸಿನ ನಂತರವೂ, ಪ್ರಾಥಮಿಕ ಶಿಕ್ಷಣ ಪೂರೈಸುವವರೆಗೆ ಉಚಿತ ಶಿಕ್ಷಣ ಪಡೆಯಲು ಹಕ್ಕು ಹೊಂದಿರತಕ್ಕದ್ದು.

5. **ಇತರ ಶಾಲೆಗೆ ವರ್ಗಾವಣೆ ಕೋರಲು ಹಕ್ಕು.–** (1) ಒಂದು ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು ಅವಕಾಶವಿಲ್ಲದಿರುವಾಗ, ಮಗುವು ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv)ನೇ ಉಪ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶಾಲೆಯನ್ನು ಹೊರತುಪಡಿಸಿ, ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರಲು ಹಕ್ಕು ಹೊಂದಿರತಕ್ಕದ್ದು.

(2) ಯಾವುದೇ ಕಾರಣಕ್ಕಾಗಿ, ರಾಜ್ಯದೊಳಗಡೆಯಾಗಲಿ ಅಥವಾ ಹೊರಗಡೆಯಾಗಲಿ, ಮಗು ಒಂದು ಶಾಲೆಯಿಂದ ಮತ್ತೊಂದು ಶಾಲೆಗೆ ಹೋಗಬೇಕಾದ ಅಗತ್ಯ ಬಿದ್ದರೆ, ಅಂಥ ಮಗುವು ತನ್ನ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಲು 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv)ನೇ ಉಪಖಂಡಗಳಲ್ಲಿ ನಿರ್ದಿಷ್ಟಪಡಿಸಲಾದ ಶಾಲೆಯನ್ನು ಹೊರತುಪಡಿಸಿ, ಯಾವುದೇ ಇತರ ಶಾಲೆಗೆ ವರ್ಗಾವಣೆ ಕೋರಲು ಹಕ್ಕು ಹೊಂದಿರತಕ್ಕದ್ದು.

(3) ಅಂಥ ಇತರ ಶಾಲೆಗೆ ಸೇರಿಕೊಳ್ಳುವುದಕ್ಕಾಗಿ, ಅಂಥ ಮಗು ಈ ಹಿಂದೆ ಸೇರಿಕೊಂಡಿದ್ದ ಶಾಲೆಯ ಮುಖ್ಯ ಶಿಕ್ಷಕನು ಅಥವಾ ಶಾಲೆಯ ಪ್ರಭಾರದಲ್ಲಿರುವ ಶಿಕ್ಷಕನು ಕೂಡಲೇ ವರ್ಗಾವಣೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು:

ಪರಂತು, ವರ್ಗಾವಣೆ ಪ್ರಮಾಣ ಪತ್ರವನ್ನು ಸಲ್ಲಿಸುವಲ್ಲಿನ ವಿಳಂಬವು ಅಂಥ ಇತರ ಶಾಲೆಗೆ ಸೇರಿಸಿಕೊಳ್ಳಲು ವಿಳಂಬ ಮಾಡುವುದಕ್ಕೆ ಅಥವಾ ಸೇರಿಸಿಕೊಳ್ಳಲು ನಿರಾಕರಿಸುವುದಕ್ಕೆ ಕಾರಣವಾಗತಕ್ಕದ್ದಲ್ಲ:

ಮತ್ತೂ ಪರಂತು, ಮುಖ್ಯ ಶಿಕ್ಷಕನು ಅಥವಾ ಶಾಲೆಯ ಪ್ರಭಾರದಲ್ಲಿರುವ ಶಿಕ್ಷಕನು ವರ್ಗಾವಣೆ ಪ್ರಮಾಣಪತ್ರವನ್ನು ನೀಡಲು ವಿಳಂಬ ಮಾಡಿದರೆ, ಅವನಿಗೆ ಅಥವಾ ಅವಳಿಗೆ ಅನ್ವಯವಾಗುವ ಸೇವಾ ನಿಯಮಗಳ ಮೇರೆಗೆ ಶಿಸ್ತುಕ್ರಮಕ್ಕೆ ಗುರಿಯಾಗತಕ್ಕದ್ದು.

## ಅಧ್ಯಾಯ - III

### ಸಮುಚಿತ ಸರ್ಕಾರದ, ಸ್ಥಳೀಯ ಪ್ರಾಧಿಕಾರದ ಮತ್ತು ತಂದೆ ತಾಯಿಯರ ಕರ್ತವ್ಯಗಳು

**6. ಶಾಲೆಯನ್ನು ಸ್ಥಾಪಿಸುವಲ್ಲಿ ಸಮುಚಿತ ಸರ್ಕಾರದ ಮತ್ತು ಸ್ಥಳೀಯ ಪ್ರಾಧಿಕಾರದ ಕರ್ತವ್ಯ.–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು, ನಿಯಮಿಸಬಹುದಾದಂಥ ಪ್ರದೇಶದಲ್ಲಿ ಅಥವಾ ಹತ್ತಿರದಲ್ಲಿ ಶಾಲೆಯನ್ನು ಸ್ಥಾಪಿಸಿರದಿದ್ದರೆ, ಈ ಅಧಿನಿಯಮದ ಪ್ರಾರಂಭದಿಂದ ಮೂರು ವರ್ಷದ ಅವಧಿಯೊಳಗಾಗಿ ಒಂದು ಶಾಲೆಯನ್ನು ಸ್ಥಾಪಿಸತಕ್ಕದ್ದು.

**7. ಹಣಕಾಸು ಮತ್ತು ಇತರ ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು.–** (1) ಕೇಂದ್ರ ಸರ್ಕಾರವು ಮತ್ತು ರಾಜ್ಯ ಸರ್ಕಾರಗಳು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಧಿಗಳನ್ನು ಒದಗಿಸುವುದಕ್ಕೆ ಸಮಾನ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ಬಂಡವಾಳ ಮತ್ತು ಆವರ್ತಕ ವೆಚ್ಚದ ಅಂದಾಜುಗಳನ್ನು ತಯಾರಿಸತಕ್ಕದ್ದು.

(3) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಬಹುದಾದಂತೆ, (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ವೆಚ್ಚದ ಅಂಥ ಶೇಕಡ ಪ್ರಮಾಣವನ್ನು ರಾಜಸ್ವಗಳ ಸಹಾಯಾನುದಾನ ರೂಪದಲ್ಲಿ ರಾಜ್ಯ ಸರ್ಕಾರಗಳಿಗೆ ಒದಗಿಸತಕ್ಕದ್ದು.

(4) ಕೇಂದ್ರ ಸರ್ಕಾರವು, ಯಾವುದೇ ರಾಜ್ಯ ಸರ್ಕಾರಕ್ಕೆ ಒದಗಿಸಬೇಕಾದ ಹೆಚ್ಚುವರಿ ಸಂಪನ್ಮೂಲಗಳ ಅಗತ್ಯತೆಗಳನ್ನು ಪರಿಶೀಲಿಸಲು 280ನೇ ಅನುಚ್ಛೇದದ (3)ನೇ ಖಂಡದ (ಡಿ) ಉಪ ಖಂಡದ ಮೇರೆಗೆ ಹಣಕಾಸು ಆಯೋಗಕ್ಕೆ ಉಲ್ಲೇಖಿಸುವಂತೆ ರಾಷ್ಟ್ರಪತಿಯನ್ನು ಕೋರಬಹುದು. ಇದರಿಂದ ಸದರಿ ರಾಜ್ಯ ಸರ್ಕಾರವು ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ತನ್ನ ಪಾಲಿನ ನಿಧಿಗಳನ್ನು ಒದಗಿಸಬಹುದಾಗಿದೆ.

(5) ಉಪ ಪ್ರಕರಣ (4)ರಲ್ಲಿ ಏನೇ ಒಳಗೊಂಡಿದ್ದರೂ, ರಾಜ್ಯ ಸರ್ಕಾರವು, (3)ನೇ ಉಪ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರಕ್ಕೆ ಒದಗಿಸಿದ ಮೊತ್ತವನ್ನು ಮತ್ತು ತನ್ನ ಇತರ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡು ಅಧಿನಿಯಮದ ಉಪಬಂಧಗಳ ಅನುಷ್ಠಾನಕ್ಕಾಗಿ ನಿಧಿಗಳನ್ನು ಒದಗಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(6) ಕೇಂದ್ರ ಸರ್ಕಾರವು,–

(ಎ) 29ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಶೈಕ್ಷಣಿಕ ಪ್ರಾಧಿಕಾರದ ನೆರವಿನೊಂದಿಗೆ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ರೂಪಿಸತಕ್ಕದ್ದು;

(ಬಿ) ಶಿಕ್ಷಕರ ತರಬೇತಿಗಾಗಿ ಗುಣಮಟ್ಟಗಳನ್ನು ರೂಪಿಸತಕ್ಕದ್ದು ಮತ್ತು ಜಾರಿಗೊಳಿಸತಕ್ಕದ್ದು;

(ಸಿ) ನವೀನ ಆವಿಷ್ಕಾರಗಳಿಗೆ, ಸಂಶೋಧನೆಗಳಿಗೆ, ಯೋಜನೆ ರೂಪಿಸುವುದಕ್ಕೆ ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ತಾಂತ್ರಿಕ ನೆರವನ್ನು ಮತ್ತು ಸಂಪನ್ಮೂಲಗಳನ್ನು ಒದಗಿಸತಕ್ಕದ್ದು.

**8. ಸಮುಚಿತ ಸರ್ಕಾರದ ಕರ್ತವ್ಯಗಳು.–** ಸಮುಚಿತ ಸರ್ಕಾರವು,–

(ಎ) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ, ಮಗುವಿನ ತಂದೆ – ತಾಯಿ ಅಥವಾ ಪೋಷಕ, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ, ಒಡೆತನ ಹೊಂದಿದ, ನಿಯಂತ್ರಣ ಹೊಂದಿರುವ ಅಥವಾ ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂತಹ ಶಾಲೆಯಲ್ಲದ ಒಂದು ಶಾಲೆಗೆ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಅಂಥ ಮಗುವು ಅಥವಾ ಅದರ ತಂದೆ – ತಾಯಿಯು ಅಥವಾ ಪೋಷಕನು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ಭರಿಸಿದ ವೆಚ್ಚವನ್ನು ತುಂಬಿ ಕೊಡುವಂತೆ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ;

**ವಿವರಣೆ–** "ಕಡ್ಡಾಯ ಶಿಕ್ಷಣ" ಎಂಬ ಪದದ ಅರ್ಥವೇನೆಂದರೆ,–

(i) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲು; ಮತ್ತು

(ii) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಸೇರುವಂತೆ, ಹಾಜರಾಗುವಂತೆ ಮತ್ತು ಅದನ್ನು ಪೂರ್ಣಗೊಳಿಸುವಂತೆ ಸುನಿಶ್ಚಿತಪಡಿಸಿಕೊಳ್ಳಲು

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಹತ್ತಿರದಲ್ಲೇ ಶಾಲೆ ಇರುವಂತೆ ಸುನಿಶ್ಚಿತಪಡಿಸಿಕೊಳ್ಳಲು;

(ಸಿ) ದುರ್ಬಲ ವರ್ಗಕ್ಕೆ ಸೇರಿದ ಮಗುವಿಗೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗುವಿಗೆ ಯಾವುದೇ ಕಾರಣಗಳಿಂದ ತಾರತಮ್ಯ ಮಾಡುತ್ತಿಲ್ಲ ಮತ್ತು ಆ ಮಗು ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಯುಂಟುಮಾಡುತ್ತಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು;

(ಎ) 29ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಶೈಕ್ಷಣಿಕ ಪ್ರಾಧಿಕಾರದ ನೆರವಿನೊಂದಿಗೆ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟನ್ನು ರೂಪಿಸತಕ್ಕದ್ದು;

(ಬಿ) ಶಿಕ್ಷಕರ ತರಬೇತಿಗಾಗಿ ಗುಣಮಟ್ಟಗಳನ್ನು ರೂಪಿಸತಕ್ಕದ್ದು ಮತ್ತು ಜಾರಿಗೊಳಿಸತಕ್ಕದ್ದು;

(ಸಿ) ನವೀನ ಆವಿಷ್ಕಾರಗಳಿಗೆ, ಸಂಶೋಧನೆಗಳಿಗೆ, ಯೋಜನೆ ರೂಪಿಸುವುದಕ್ಕೆ ಮತ್ತು ಸಾಮರ್ಥ್ಯ ನಿರ್ಮಾಣಕ್ಕೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರಕ್ಕೆ ತಾಂತ್ರಿಕ ನೆರವನ್ನು ಮತ್ತು ಸಂಪನ್ಮೂಲಗಳನ್ನು ಒದಗಿಸತಕ್ಕದ್ದು.

**8. ಸಮುಚಿತ ಸರ್ಕಾರದ ಕರ್ತವ್ಯಗಳು.–** ಸಮುಚಿತ ಸರ್ಕಾರವು,–

(ಎ) ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ, ಮಗುವಿನ ತಂದೆ – ತಾಯಿ ಅಥವಾ ಪೋಷಕ, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ, ಒಡೆತನ ಹೊಂದಿದ, ನಿಯಂತ್ರಣ ಹೊಂದಿರುವ ಅಥವಾ ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂತಹ ಶಾಲೆಯಲ್ಲದ ಒಂದು ಶಾಲೆಗೆ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಅಂಥ ಮಗುವು ಅಥವಾ ಅದರ ತಂದೆ – ತಾಯಿಯು ಅಥವಾ ಪೋಷಕನು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ಭರಿಸಿದ ವೆಚ್ಚವನ್ನು ತುಂಬಿ ಕೊಡುವಂತೆ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ;

**ವಿವರಣೆ–** "ಕಡ್ಡಾಯ ಶಿಕ್ಷಣ" ಎಂಬ ಪದದ ಅರ್ಥವೇನೆಂದರೆ,–

(i) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವಿಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ಒದಗಿಸಲು; ಮತ್ತು

(ii) ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಪ್ರತಿಯೊಂದು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಸೇರುವಂತೆ, ಹಾಜರಾಗುವಂತೆ ಮತ್ತು ಅದನ್ನು ಪೂರ್ಣಗೊಳಿಸುವಂತೆ ಸುನಿಶ್ಚಿತಪಡಿಸಿಕೊಳ್ಳಲು

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಹತ್ತಿರದಲ್ಲೇ ಶಾಲೆ ಇರುವಂತೆ ಸುನಿಶ್ಚಿತಪಡಿಸಿಕೊಳ್ಳಲು;

(ಸಿ) ದುರ್ಬಲ ವರ್ಗಕ್ಕೆ ಸೇರಿದ ಮಗುವಿಗೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗುವಿಗೆ ಯಾವುದೇ ಕಾರಣಗಳಿಂದ ತಾರತಮ್ಯ ಮಾಡುತ್ತಿಲ್ಲ ಮತ್ತು ಆ ಮಗು ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಯುಂಟುಮಾಡುತ್ತಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು;

(ಡಿ) ಶಾಲೆಯ ಕಟ್ಟಡ, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸಲು;

(ಇ) 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸಲು;

(ಎಫ್) ಪ್ರತಿಯೊಂದು ಮಗುವೂ, ಪ್ರಾಥಮಿಕ ಶಿಕ್ಷಣಕ್ಕೆ ಸೇರುವಂತೆ, ಹಾಜರಾಗುವಂತೆ ಮತ್ತು ಅದನ್ನು ಪೂರ್ಣಗೊಳಿಸುವಂತೆ ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡಲು;

(ಜಿ) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ಸುನಿಶ್ಚಿತಪಡಿಸಿಕೊಳ್ಳಲು;

(ಎಚ್) ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮವನ್ನು ಮತ್ತು ವ್ಯಾಸಂಗ ಕ್ರಮಗಳನ್ನು ಸಕಾಲದಲ್ಲಿ ನಿಯಮಿಸುವಂತೆ ಸುನಿಶ್ಚಿತಪಡಿಸಿಕೊಳ್ಳಲು; ಮತ್ತು

(ಐ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸಲು

–ಸಮುಚಿತ ಸರ್ಕಾರಕ್ಕಿರುವ ಬಾಧ್ಯತೆ.

**9. ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು.–** ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವು,–

(ಎ) ಪ್ರತಿಯೊಂದು ಮಗುವಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು:

ಪರಂತು, ಸಂದರ್ಭಾನುಸಾರ ಮಗುವಿನ ತಂದೆ – ತಾಯಿ ಅಥವಾ ಪೋಷಕನು, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ, ಒಡೆತನ ಹೊಂದಿರುವ, ನಿಯಂತ್ರಣ ಹೊಂದಿರುವ ಅಥವಾ ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವಂಥ ಶಾಲೆಯಲ್ಲದ ಒಂದು ಶಾಲೆಗೆ ತಮ್ಮ ಮಗುವನ್ನು ಸೇರಿಸಿದ್ದಲ್ಲಿ, ಸಂದರ್ಭಾನುಸಾರ, ಆ ಮಗುವು ಅಥವಾ ಅದರ ತಂದೆ – ತಾಯಿಯು ಅಥವಾ ಪೋಷಕನು ಅಂಥ ಇತರ ಶಾಲೆಯಲ್ಲಿ ಮಗುವಿನ ಪ್ರಾಥಮಿಕ ಶಿಕ್ಷಣಕ್ಕಾಗಿ ಭರಿಸಿದ ವೆಚ್ಚವನ್ನು ತುಂಬಿಕೊಡುವಂತೆ ಕ್ಲೇಮು ಮಾಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ;

(ಬಿ) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂತೆ ಹತ್ತಿರದಲ್ಲೇ ಶಾಲೆಯು ಇರುವಂತೆ ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಸಿ) ದುರ್ಬಲ ವರ್ಗಕ್ಕೆ ಸೇರಿದ ಮಗುವಿಗೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿದ ಮಗುವಿಗೆ ಯಾವುದೇ ಕಾರಣಗಳಿಂದ ತಾರತಮ್ಯ ಮಾಡುತ್ತಿಲ್ಲ ಮತ್ತು ಆ ಮಗು ಪ್ರಾಥಮಿಕ ಶಿಕ್ಷಣವನ್ನು ಮುಂದುವರಿಸುವುದಕ್ಕೆ ಮತ್ತು ಅದನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿಮಾಡುತ್ತಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಡಿ) ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ ಹದಿನಾಲ್ಕು ವರ್ಷ ವಯಸ್ಸಿನವರೆಗಿನ ಮಕ್ಕಳ ದಾಖಲೆಯನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ನಿರ್ವಹಿಸತಕ್ಕದ್ದು;

(ಇ) ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಮಗುವೂ, ಪ್ರಾಥಮಿಕ ಶಿಕ್ಷಣಕ್ಕೆ ಸೇರುವಂತೆ, ಹಾಜರಾಗುವಂತೆ ಮತ್ತು ಅದನ್ನು ಪೂರ್ಣಗೊಳಿಸುವಂತೆ ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಬಗ್ಗೆ ಮೇಲ್ವಿಚಾರಣೆ ಮಾಡತಕ್ಕದ್ದು;

(ಎಫ್) ಶಾಲೆಯ ಕಟ್ಟಡ, ಬೋಧನಾ ಸಿಬ್ಬಂದಿ ಮತ್ತು ಕಲಿಕಾ ಸಾಮಗ್ರಿ ಸೇರಿದಂತೆ ಮೂಲ ಸೌಕರ್ಯಗಳನ್ನು ಒದಗಿಸತಕ್ಕದ್ದು;

(ಜಿ) 4ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಶೇಷ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಎಚ್) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಮಾನಕ ಗುಣಮಟ್ಟಗಳಿಗೆ ಮತ್ತು ಪ್ರಮಾಣಕಗಳಿಗೆ ಅನುಗುಣವಾಗಿ ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ದೊರೆಯುವಂತೆ ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಐ) ಪ್ರಾಥಮಿಕ ಶಿಕ್ಷಣಕ್ಕಾಗಿ ಪಠ್ಯಕ್ರಮವನ್ನು ಮತ್ತು ವ್ಯಾಸಂಗ ಕ್ರಮಗಳನ್ನು ಸಕಾಲದಲ್ಲಿ ನಿಯಮಿಸುವಂತೆ ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಜೆ) ಶಿಕ್ಷಕರಿಗೆ ತರಬೇತಿ ಸೌಲಭ್ಯವನ್ನು ಒದಗಿಸತಕ್ಕದ್ದು;

(ಕೆ) ವಲಸೆ ಬಂದ ಕುಟುಂಬಗಳ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಎಲ್) ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಶಾಲೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡತಕ್ಕದ್ದು;

(ಎಂ) ಶೈಕ್ಷಣಿಕ ವರ್ಷದ ಕ್ಯಾಲೆಂಡರನ್ನು ನಿರ್ಧರಿಸತಕ್ಕದ್ದು.

**10. ತಂದೆ – ತಾಯಿಯರ ಮತ್ತು ಪೋಷಕರ ಕರ್ತವ್ಯ.–** ಪ್ರತಿಯೊಬ್ಬ ತಂದೆ – ತಾಯಿ ಅಥವಾ ಪೋಷಕನು ಸಂದರ್ಭಾನುಸಾರ ತನ್ನ ಮಗುವನ್ನು ಅಥವಾ ತನ್ನ ಪೋಷಿತನನ್ನು ಹತ್ತಿರದ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸೇರಿಸುವುದು ಅಥವಾ ಸೇರಿಸುವಂತೆ ಮಾಡುವುದು ಆತನ ಅಥವಾ ಅವಳ ಕರ್ತವ್ಯವಾಗಿರತಕ್ಕದ್ದು.

**11. ಸಮುಚಿತ ಸರ್ಕಾರವು ಶಾಲಾ ಪೂರ್ವ ಶಿಕ್ಷಣ ಒದಗಿಸುವುದು.–** ಮೂರು ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಸಜ್ಜುಗೊಳಿಸುವ ದೃಷ್ಟಿಯಿಂದ ಮತ್ತು ಮಕ್ಕಳಿಗೆ ಆರು ವರ್ಷ ವಯಸ್ಸು ತುಂಬುವವರೆಗೆ ಎಲ್ಲ ಮಕ್ಕಳಿಗೆ ಬಾಲ್ಯಾವಸ್ಥೆಯಲ್ಲಿ ಪಾಲನೆ ಪೋಷಣೆಯನ್ನು ಮತ್ತು ಶಿಕ್ಷಣವನ್ನು ಒದಗಿಸುವ ದೃಷ್ಟಿಯಿಂದ ಸಮುಚಿತ ಸರ್ಕಾರವು ಅಂಥ ಮಕ್ಕಳಿಗೆ ಉಚಿತ ಶಾಲಾ ಪೂರ್ವ ಶಿಕ್ಷಣ ಒದಗಿಸುವುದಕ್ಕೆ ಅಗತ್ಯ ವ್ಯವಸ್ಥೆ ಮಾಡಬಹುದು.

## ಅಧ್ಯಾಯ – IV

## ಶಾಲೆಗಳ ಮತ್ತು ಶಿಕ್ಷಕರ ಜವಾಬ್ದಾರಿಗಳು

**12. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಶಾಲೆಗಳ ಜವಾಬ್ದಾರಿಯ ವ್ಯಾಪ್ತಿ.–** (1) ಈ ಅಧಿನಿಯಮದ ಉದ್ದೇಶಗಳಿಗಾಗಿ,–

(ಎ) 2ನೇ ಪ್ರಕರಣದ (ಎನ್) ಖಂಡದ (i)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿರುವ ಶಾಲೆಯು ಅದಕ್ಕೆ ಸೇರಿಸಿದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು;

(ಬಿ) 2ನೇ ಪ್ರಕರಣದ (ಎನ್) ಖಂಡದ (ii)ನೇ ಉಪ-ಖಂಡದಲ್ಲಿ ನಿರ್ದಿಷ್ಟ ಪಡಿಸಿದ ಶಾಲೆಯು, ಅದು ಪಡೆದ ವಾರ್ಷಿಕ ಆವರ್ತಕ ನೆರವು ಅಥವಾ ಅನುದಾನಗಳು ಅದರ ವಾರ್ಷಿಕ ಆವರ್ತಕ ವೆಚ್ಚಗಳಲ್ಲಿ ಎಷ್ಟು ಪ್ರಮಾಣದವಾಗಿರುತ್ತವೋ, ಆ ಶಾಲೆಗೆ ಸೇರಿರುವ ಮಕ್ಕಳಲ್ಲಿ ಅಷ್ಟೇ ಪ್ರಮಾಣದ ಮಕ್ಕಳಿಗೆ, ಕನಿಷ್ಠ ಶೇಕಡಾ ಇಪ್ಪತ್ತೈದಕ್ಕೆ ಒಳಪಟ್ಟು, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸತಕ್ಕದ್ದು;

(ಸಿ) 2ನೇ ಪ್ರಕರಣದ (ಎನ್) ಖಂಡದ (iii) ಮತ್ತು (iv)ನೇ ಉಪ-ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು Iನೇ ತರಗತಿಯ ಒಟ್ಟು ವಿದ್ಯಾರ್ಥಿಗಳ ಸಂಖ್ಯಾ ಬಲದಲ್ಲಿ ಕನಿಷ್ಠ ಶೇಕಡಾ ಇಪ್ಪತ್ತೈದರಷ್ಟು ಭಾಗಕ್ಕೆ ಹತ್ತಿರದಲ್ಲಿರುವ ದುರ್ಬಲ ವರ್ಗಕ್ಕೆ ಮತ್ತು ಅನುಕೂಲ ವಂಚಿತ ಗುಂಪಿಗೆ ಸೇರಿರುವ ಮಕ್ಕಳಿಗೆ ಆ ತರಗತಿಯಲ್ಲಿ ಪ್ರವೇಶ ನೀಡತಕ್ಕದ್ದು ಮತ್ತು ಅವರ ಶಿಕ್ಷಣ ಮುಗಿಯುವವರೆಗೆ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು:

ಪರಂತು, 2ನೇ ಪ್ರಕರಣದ (ಎನ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು ಶಾಲಾ ಪೂರ್ವ ಶಿಕ್ಷಣವನ್ನು ನೀಡುತ್ತಿರುವಲ್ಲಿ, (ಎ) ಯಿಂದ (ಸಿ) ವರೆಗಿನ ಖಂಡಗಳ ಉಪಬಂಧಗಳು ಅಂಥ ಶಾಲಾ ಪೂರ್ವ ಶಿಕ್ಷಣಕ್ಕೆ ಮಗುವನ್ನು ಸೇರಿಸಿಕೊಳ್ಳುವುದಕ್ಕೆ ಅನ್ವಯವಾಗತಕ್ಕದ್ದು.

(2) (1)ನೇ ಉಪ ಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದಂತೆ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುತ್ತಿರುವ 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ-ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಗೆ ಅದು ಹಾಗೆ ವಹಿಸಿದ ವೆಚ್ಚವನ್ನು, ರಾಜ್ಯವು, ಪ್ರತಿಯೊಂದು ಮಗುವಿನ ಸಂಬಂಧದಲ್ಲಿ ವಹಿಸಿದ ವೆಚ್ಚದಷ್ಟರಮಟ್ಟಿಗೆ ಅಥವಾ ಮಗುವಿನಿಂದ ಶುಲ್ಕವಾಗಿ ಪಡೆದ ವಾಸ್ತವಿಕ ಮೊತ್ತ, ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಪ್ರಮಾಣದ ಮಟ್ಟಿಗೆ ನಿಯಮಿಸಬಹುದಾದಂಥ ರೀತಿಯಲ್ಲಿ ತುಂಬಿಕೊಡತಕ್ಕದ್ದು:

ಪರಂತು, ಹಾಗೆ ತುಂಬಿಕೊಟ್ಟ ಹಣವು 2ನೇ ಪ್ರಕರಣದ (ಎನ್) ಖಂಡದ (i)ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು ಪ್ರತಿಯೊಂದು ಮಗುವಿಗೆ ವಹಿಸಿದ ವೆಚ್ಚವನ್ನು ಮೀರತಕ್ಕದ್ದಲ್ಲ:

ಮತ್ತೂ ಪರಂತು, ಅಂಥ ಶಾಲೆಯು, ಉಚಿತವಾಗಿಯಾಗಲಿ ಅಥವಾ ರಿಯಾಯಿತಿ ದರದಲ್ಲಾಗಲಿ, ಯಾವುದೇ ಭೂಮಿಯನ್ನು, ಕಟ್ಟಡವನ್ನು, ಸಾಧನ ಸಾಮಗ್ರಿಯನ್ನು ಅಥವಾ ಇತರ ಸೌಲಭ್ಯಗಳನ್ನು ಸ್ವೀಕರಿಸಿರುವ ಕಾರಣದಿಂದಾಗಿ ನಿರ್ದಿಷ್ಟ ಸಂಖ್ಯೆಯ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸಲು ಈಗಾಗಲೇ ಬದ್ಧವಾಗಿರುವಲ್ಲಿ, ಅಂಥ ಶಾಲೆಯು ಹಾಗೆ ತಾನು ಬದ್ಧವಾಗಿರುವಷ್ಟರಮಟ್ಟಿಗೆ ವೆಚ್ಚವನ್ನು ಮರಳಿ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದಲ್ಲ.

(3) ಪ್ರತಿಯೊಂದು ಶಾಲೆಯು, ಸಂದರ್ಭಾನುಸಾರ ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಅಗತ್ಯಪಡಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು.

13. **ಪ್ರವೇಶಕ್ಕೆ ಯಾವುದೇ ಕ್ಯಾಪಿಟೇಷನ್ ಫೀಜು ಮತ್ತು ಪರಿಶೀಲನಾ ಪ್ರಕ್ರಿಯೆ ಇರತಕ್ಕದ್ದಲ್ಲ.**- (1) ಯಾವುದೇ ಶಾಲೆಯು ಅಥವಾ ಯಾರೇ ವ್ಯಕ್ತಿಯು, ಒಂದು ಮಗುವನ್ನು ಶಾಲೆಗೆ ಸೇರಿಸಿಕೊಳ್ಳುವಾಗ, ಯಾವುದೇ ಕ್ಯಾಪಿಟೇಷನ್ ಫೀಜನ್ನು ವಸೂಲು ಮಾಡತಕ್ಕದ್ದಲ್ಲ ಮತ್ತು ಮಗುವನ್ನು ಅಥವಾ ಅವನ ಅಥವಾ ಅವಳ ತಂದೆ-ತಾಯಿಯನ್ನು ಅಥವಾ ಪೋಷಕನನ್ನು ಯಾವುದೇ ಪರಿಶೀಲನಾ ಪ್ರಕ್ರಿಯೆಗೆ ಒಳಪಡಿಸತಕ್ಕದ್ದಲ್ಲ.

(2) ಯಾವುದೇ ಶಾಲೆಯು ಅಥವಾ ಯಾರೇ ವ್ಯಕ್ತಿಯು (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ,-

(ಎ) ಕ್ಯಾಪಿಟೇಷನ್ ಫೀಜನ್ನು ಸ್ವೀಕರಿಸಿದರೆ, ವಿಧಿಸಿದ ಕ್ಯಾಪಿಟೇಷನ್ ಫೀಜಿನ ಹತ್ತುಪಟ್ಟಿನವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು;

(ಬಿ) ಮಗುವನ್ನು ಪರಿಶೀಲನಾ ಪ್ರಕ್ರಿಯೆಗೆ ಒಳಪಡಿಸಿದರೆ, ಮೊದಲ ಉಲ್ಲಂಘನೆಗೆ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ಮತ್ತು ತರುವಾಯದ ಪ್ರತಿಯೊಂದು ಉಲ್ಲಂಘನೆಗೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.

14. **ಪ್ರವೇಶಕ್ಕೆ ವಯಸ್ಸಿನ ರುಜುವಾತು.**- (1) ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ನೀಡುವ ಉದ್ದೇಶಗಳಿಗಾಗಿ, ಮಗುವಿನ ವಯಸ್ಸನ್ನು, ಜನನ, ಮರಣ ಮತ್ತು ವಿವಾಹಗಳ ನೋಂದಣಿ ಅಧಿನಿಯಮ, 1886 (1886ರ 6)ರ ಉಪಬಂಧಗಳಿಗನುಸಾರವಾಗಿ ನೀಡಿದ ಜನನ ಪ್ರಮಾಣಪತ್ರದ ಆಧಾರದ ಮೇಲೆ ಅಥವಾ ನಿಯಮಿಸಬಹುದಾದಂಥ ಇತರ ದಸ್ತಾವೇಜಿನ ಆಧಾರದ ಮೇಲೆ ನಿರ್ಧರಿಸತಕ್ಕದ್ದು.

(2) ವಯಸ್ಸಿನ ರುಜುವಾತು ಇಲ್ಲದಿರುವ ಕಾರಣದಿಂದಾಗಿ ಯಾವುದೇ ಮಗುವಿಗೆ ಶಾಲೆಗೆ ಪ್ರವೇಶ ನೀಡಲು ನಿರಾಕರಿಸತಕ್ಕದ್ದಲ್ಲ.

15. **ಪ್ರವೇಶವನ್ನು ನಿರಾಕರಿಸುವಂತಿಲ್ಲ.**- ಮಗುವನ್ನು ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಅಥವಾ ನಿಯಮಿಸಬಹುದಾದಂತೆ ವಿಸ್ತರಿಸಿದ ಅಂಥ ಅವಧಿಯ ಒಳಗೆ ಶಾಲೆಗೆ ಸೇರಿಸಿಕೊಳ್ಳತಕ್ಕದ್ದು:

ಪರಂತು, ಯಾವುದೇ ಮಗುವನ್ನು, ವಿಸ್ತರಿಸಿದ ಅವಧಿಯ ತರುವಾಯ ಶಾಲೆಗೆ ಸೇರಿಸಲು ಬಯಸಿದರೆ, ಅದಕ್ಕೆ ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ:

ಮತ್ತೂ ಪರಂತು, ವಿಸ್ತರಿಸಿದ ಅವಧಿಯ ತರುವಾಯ ಪ್ರವೇಶ ಪಡೆದ ಯಾವುದೇ ಮಗುವು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ತನ್ನ ವ್ಯಾಸಂಗವನ್ನು ಪೂರ್ಣಗೊಳಿಸತಕ್ಕದ್ದು.

16. **ತಡೆದಿರಿಸುವುದಕ್ಕೆ ಮತ್ತು ಹೊರಹಾಕುವುದಕ್ಕೆ ನಿಷೇಧ.**- ಶಾಲೆಗೆ ಪ್ರವೇಶ ಪಡೆದ ಯಾವುದೇ ಮಗುವನ್ನು ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಯಾವುದೇ ತರಗತಿಯಲ್ಲಿ ತಡೆದಿರಿಸತಕ್ಕದ್ದಲ್ಲ ಅಥವಾ ಶಾಲೆಯಿಂದ ಹೊರಹಾಕತಕ್ಕದ್ದಲ್ಲ.

17. **ಮಗುವಿಗೆ ದೈಹಿಕ ದಂಡನೆ ಮತ್ತು ಮಾನಸಿಕ ಕಿರುಕುಳ ನೀಡುವುದಕ್ಕೆ ನಿಷೇಧ.**- (1) ಯಾವುದೇ ಮಗುವನ್ನು ದೈಹಿಕ ದಂಡನೆಗೆ ಅಥವಾ ಮಾನಸಿಕ ಕಿರುಕುಳಕ್ಕೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅವನಿಗೆ ಅನ್ವಯವಾಗುವ ಸೇವಾ ನಿಯಮಗಳ ಮೇರೆಗೆ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು.

**18. ಮಾನ್ಯತಾ ಪ್ರಮಾಣಪತ್ರವನ್ನು ಪಡೆಯದೆ ಯಾವುದೇ ಶಾಲೆಯನ್ನು ಸ್ಥಾಪಿಸತಕ್ಕದ್ದಲ್ಲ.–** (1) ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ, ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಶಾಲೆಯನ್ನು ಹೊರತುಪಡಿಸಿ, ಯಾವುದೇ ಶಾಲೆಯನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಅಂಥ ಪ್ರಾಧಿಕಾರದಿಂದ ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಸ್ಥಾಪಿಸತಕ್ಕದ್ದಲ್ಲ ಅಥವಾ ಅದು ಕಾರ್ಯ ನಿರ್ವಹಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು, ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ಅವಧಿಯ ಒಳಗೆ, ಅಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಮಾನ್ಯತಾ ಪ್ರಮಾಣಪತ್ರವನ್ನು ನೀಡತಕ್ಕದ್ದು:

ಪರಂತು, 19ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಪೂರೈಸಿದ ಹೊರತು, ಶಾಲೆಗೆ ಅಂಥ ಯಾವುದೇ ಮಾನ್ಯತೆಯನ್ನು ನೀಡತಕ್ಕದ್ದಲ್ಲ.

(3) ಮಾನ್ಯತೆಯ ಷರತ್ತುಗಳನ್ನು ಉಲ್ಲಂಘಿಸಿದಾಗ, ನಿಯಮಿಸಿದ ಪ್ರಾಧಿಕಾರವು ಲಿಖಿತ ಆದೇಶದ ಮೂಲಕ ಮಾನ್ಯತೆಯನ್ನು ಹಿಂತೆಗೆದುಕೊಳ್ಳತಕ್ಕದ್ದು:

ಪರಂತು, ಅಂಥ ಆದೇಶವು, ಮಾನ್ಯತೆ ಕಳೆದುಕೊಂಡ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಹತ್ತಿರದ ಯಾವ ಶಾಲೆಗೆ ಸೇರಿಸಬೇಕು ಎಂಬ ಬಗ್ಗೆ ನಿರ್ದೇಶನವನ್ನು ಒಳಗೊಂಡಿರತಕ್ಕದ್ದು:

ಮತ್ತೂ ಪರಂತು, ಅಂಥ ಶಾಲೆಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೆ ಯಾವುದೇ ಮಾನ್ಯತೆಯನ್ನು ಹಾಗೆ ಹಿಂತೆಗೆದುಕೊಳ್ಳತಕ್ಕದ್ದಲ್ಲ.

(4) (3)ನೇ ಉಪ ಪ್ರಕರಣದ ಮೇರೆಗೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾದ ದಿನಾಂಕದಿಂದ ಜಾರಿಗೆ ಬರುವಂತೆ, ಅಂಥ ಯಾವುದೇ ಶಾಲೆಯು ಕಾರ್ಯನಿರ್ವಹಿಸುವುದನ್ನು ಮುಂದುವರಿಸತಕ್ಕದ್ದಲ್ಲ.

(5) ಮಾನ್ಯತಾ ಪ್ರಮಾಣ ಪತ್ರವನ್ನು ಪಡೆಯದೆ ಶಾಲೆಯನ್ನು ಸ್ಥಾಪಿಸುವ ಅಥವಾ ನಡೆಸುವ ಅಥವಾ ಮಾನ್ಯತೆಯನ್ನು ಹಿಂತೆಗೆದುಕೊಂಡ ನಂತರವೂ ಶಾಲೆ ನಡೆಸುವುದನ್ನು ಮುಂದುವರಿಸುವ ಯಾರೇ ವ್ಯಕ್ತಿಯು, ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯ ಮುಂದುವರಿದ ಅವಧಿಯಲ್ಲಿ ಪ್ರತಿಯೊಂದು ದಿನಕ್ಕೆ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.

**19. ಶಾಲೆಗೆ ಸಂಬಂಧಿಸಿದಂತೆ ಪ್ರಮಾಣಕಗಳು ಮತ್ತು ಗುಣಮಟ್ಟಗಳು.–** ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಪೂರೈಸಿದ ಹೊರತು, ಯಾವುದೇ ಶಾಲೆಯನ್ನು 18ನೇ ಪ್ರಕರಣದ ಮೇರೆಗೆ ಸ್ಥಾಪಿಸತಕ್ಕದ್ದಲ್ಲ ಅಥವಾ ಅದಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಸ್ಥಾಪಿಸಲಾದ ಶಾಲೆಯು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಪೂರೈಸದಿರುವಲ್ಲಿ, ಅದು, ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಒಳಗೆ ತನ್ನ ಸ್ವಂತ ಖರ್ಚಿನಲ್ಲಿ ಅಂಥ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಪೂರೈಸಲು ಕ್ರಮ ಕೈಗೊಳ್ಳತಕ್ಕದ್ದು.

(3) ಶಾಲೆಯು, (2)ನೇ ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಅವಧಿಯ ಒಳಗಾಗಿ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಪೂರೈಸಲು ವಿಫಲವಾದಲ್ಲಿ, 18ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ನಿಯಮಿಸಲಾದ ಪ್ರಾಧಿಕಾರವು, ಅದರ (3)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಅಂಥ ಶಾಲೆಗೆ ನೀಡಿದ್ದ ಮಾನ್ಯತೆಯನ್ನು ಹಿಂತೆಗೆದುಕೊಳ್ಳತಕ್ಕದ್ದು.

**(4) (3)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತೆಯನ್ನು ಹಿಂತೆಗೆದುಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ, ಯಾವುದೇ ಶಾಲೆಯು ಕಾರ್ಯ ನಿರ್ವಹಿಸುವುದನ್ನು ಮುಂದುವರೆಸತಕ್ಕದ್ದಲ್ಲ.**

**(5) ಮಾನ್ಯತೆಯನ್ನು ಹಿಂತೆಗೆದುಕೊಂಡ ನಂತರವೂ ಶಾಲೆ ನಡೆಸುವುದನ್ನು ಮುಂದುವರಿಸುವ ಯಾರೇ ವ್ಯಕ್ತಿಯು, ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಮತ್ತು ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ಉಲ್ಲಂಘನೆಯು ಮುಂದುವರಿದ ಅವಧಿಯಲ್ಲಿ, ಪ್ರತಿಯೊಂದು ದಿನಕ್ಕೆ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆಗೆ ಗುರಿಯಾಗತಕ್ಕದ್ದು.**

**20. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವುವೇ ಪ್ರಮಾಣಕಗಳನ್ನು ಮತ್ತು ಗುಣಮಟ್ಟಗಳನ್ನು ಅನುಸೂಚಿಗೆ ಸೇರಿಸುವ ಅಥವಾ ಅದರಿಂದ ತೆಗೆದುಹಾಕುವ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**21. ಶಾಲಾ ಆಡಳಿತ ಸಮಿತಿ.–** (1) 2ನೇ ಪ್ರಕರಣದ (ಎನ್) ಖಂಡದ (iv)ನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯಾಗಿರದ ಒಂದು ಶಾಲೆಯು, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳನ್ನು, ಅಂಥ ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ–ತಾಯಿಯನ್ನು ಅಥವಾ ಪೋಷಕರನ್ನು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ಆಡಳಿತ ಸಮಿತಿಯನ್ನು ರಚಿಸತಕ್ಕದ್ದು:

ಪರಂತು, ಅಂಥ ಸಮಿತಿಯ ಸದಸ್ಯರಲ್ಲಿ ಕನಿಷ್ಠ ನಾಲ್ಕನೇ ಮೂರರಷ್ಟು ಸದಸ್ಯರು ತಂದೆ–ತಾಯಿ ಅಥವಾ ಪೋಷಕರಾಗಿರತಕ್ಕದ್ದು:

ಮತ್ತು ಪರಂತು, ಅನುಕೂಲ ವಂಚಿತ ಗುಂಪಿಗೆ ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ತಂದೆ–ತಾಯಿಯರಿಗೆ ಅಥವಾ ಪೋಷಕರಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯ ನೀಡತಕ್ಕದ್ದು:

ಮತ್ತೂ ಪರಂತು, ಅಂಥ ಸಮಿತಿಯ ಸದಸ್ಯರಲ್ಲಿ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರತಕ್ಕದ್ದು.

(2) ಶಾಲಾ ಆಡಳಿತ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಶಾಲೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು;

(ಬಿ) ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಶಿಫಾರಸು ಮಾಡುವುದು;

(ಸಿ) ಸಮುಚಿತ ಸರ್ಕಾರದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಅನುದಾನಗಳ ಬಳಕೆಯ ಮೇಲ್ವಿಚಾರಣೆ ಮಾಡುವುದು; ಮತ್ತು

(ಡಿ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

22. **ಶಾಲಾ ಅಭಿವೃದ್ಧಿ ಯೋಜನೆ.–** (1) 21ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ಪ್ರತಿಯೊಂದು ಶಾಲಾ ಆಡಳಿತ ಸಮಿತಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗೆ ಹಾಗೆ ಸಿದ್ಧಪಡಿಸಿದ ಶಾಲಾ ಅಭಿವೃದ್ಧಿ ಯೋಜನೆಯು, ಸಂದರ್ಭಾನುಸಾರ, ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ರೂಪಿಸುವ ಯೋಜನೆಗಳಿಗೆ ಮತ್ತು ನೀಡುವ ಅನುದಾನಗಳಿಗೆ ಆಧಾರವಾಗಿರತಕ್ಕದ್ದು.

23. **ಶಿಕ್ಷಕರ ನೇಮಕಕ್ಕೆ ವಿದ್ಯಾರ್ಹತೆಗಳು ಮತ್ತು ಅವರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಿದ ಶೈಕ್ಷಣಿಕ ಪ್ರಾಧಿಕಾರವು ಗೊತ್ತುಪಡಿಸಿರುವಂಥ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರುವ ಯಾರೇ ವ್ಯಕ್ತಿಯು ಶಿಕ್ಷಕನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದು.

(2) ಒಂದು ರಾಜ್ಯದಲ್ಲಿ, ಶಿಕ್ಷಕರ ಶಿಕ್ಷಣದಲ್ಲಿ ವ್ಯಾಸಂಗ ಕ್ರಮಗಳನ್ನು ಅಥವಾ ತರಬೇತಿಯನ್ನು ನೀಡುವ ಸಾಕಷ್ಟು ಸಂಸ್ಥೆಗಳು ಇಲ್ಲದಿರುವಲ್ಲಿ, ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ಗೊತ್ತುಪಡಿಸಿರುವಂಥ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರುವ ಶಿಕ್ಷಕರು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿರುವಲ್ಲಿ, ಕೇಂದ್ರ ಸರ್ಕಾರವು, ತಾನು ಅವಶ್ಯಕವೆಂದು ಭಾವಿಸಿದರೆ, ಅಧಿಸೂಚನೆಯ ಮೂಲಕ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಐದು ವರ್ಷಗಳನ್ನು ಮೀರದಂಥ ಅವಧಿಗೆ, ಶಿಕ್ಷಕರ ನೇಮಕಕ್ಕೆ ಅಗತ್ಯಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಸಡಿಲಗೊಳಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಲ್ಲಿ (1)ನೇ ಉಪ-ಪ್ರಕರಣದ ಮೇರೆಗೆ ಗೊತ್ತುಪಡಿಸಿದ ಕನಿಷ್ಠ ವಿದ್ಯಾರ್ಹತೆಗಳನ್ನು ಹೊಂದಿರದ ಶಿಕ್ಷಕರು, ಐದು ವರ್ಷಗಳ ಅವಧಿಯೊಳಗೆ ಅಂಥ ಕನಿಷ್ಠ ವಿದ್ಯಾರ್ಹತೆಗಳನ್ನು ಗಳಿಸತಕ್ಕದ್ದು.

(3) ಶಿಕ್ಷಕರಿಗೆ ಸಂದಾಯಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಹಾಗೂ ಅವರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

24. **ಶಿಕ್ಷಕರ ಕರ್ತವ್ಯಗಳು ಮತ್ತು ಅವರ ಕುಂದುಕೊರತೆಗಳ ನಿವಾರಣೆ.–** (1) 23ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಶಿಕ್ಷಕನು, ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ,–

(ಎ) ಶಾಲೆಗೆ ಹಾಜರಾಗುವುದರಲ್ಲಿ ನಿಯತತೆಯನ್ನು ಕಾಪಾಡುವುದು ಮತ್ತು ಸಮಯ ಪಾಲನೆಯನ್ನು ಮಾಡುವುದು;

(ಬಿ) 29ನೇ ಪ್ರಕರಣದ (2)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಪಠ್ಯ ವಿಷಯವನ್ನು ಬೋಧಿಸುವುದು ಮತ್ತು ಅದನ್ನು ಪೂರ್ಣಗೊಳಿಸುವುದು;

(ಸಿ) ನಿರ್ದಿಷ್ಟಪಡಿಸಿದ ಕಾಲದೊಳಗೆ ಇಡೀ ಪಠ್ಯ ವಿಷಯವನ್ನು ಪೂರ್ಣಗೊಳಿಸುವುದು;

(ಡಿ) ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ನಿರ್ಧರಿಸುವುದು ಮತ್ತು ಅದಕ್ಕನುಸಾರವಾಗಿ, ಹೆಚ್ಚುವರಿ ಬೋಧನೆಯೇನಾದರೂ ಅಗತ್ಯವಿದ್ದರೆ ಅದನ್ನು ನೀಡುವುದು.

(ಇ) ತಂದೆ-ತಾಯಿಯರೊಂದಿಗೆ ಮತ್ತು ಪೋಷಕರೊಂದಿಗೆ ನಿಯತವಾಗಿ ಸಭೆಗಳನ್ನು ನಡೆಸುವುದು ಮತ್ತು ಮಕ್ಕಳು ನಿಯತವಾಗಿ ಶಾಲೆಗೆ ಬರುತ್ತಿರುವ ಬಗ್ಗೆ, ಮಗುವಿನ ಕಲಿಕಾ ಸಾಮರ್ಥ್ಯದ ಬಗ್ಗೆ, ಕಲಿಕೆಯಲ್ಲಿ ಅದು ಸಾಧಿಸಿದ ಪ್ರಗತಿಯ ಬಗ್ಗೆ ಮತ್ತು ಮಗುವಿಗೆ ಸಂಬಂಧಿಸಿದ ಯಾವುದೇ ಇತರ ಸುಸಂಗತ ಮಾಹಿತಿಯ ಬಗ್ಗೆ ಅವರಿಗೆ ತಿಳಿಯಪಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(2) (1) ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಲೋಪವೆಸಗುವ ಶಿಕ್ಷಕನು, ಆತನಿಗೆ ಅಥವಾ ಆಕೆಗೆ ಅನ್ವಯಿಸುವ ಸೇವಾ ನಿಯಮಗಳ ಮೇರೆಗೆ ಶಿಸ್ತು ಕ್ರಮಕ್ಕೆ ಗುರಿಯಾಗತಕ್ಕದ್ದು:

ಪರಂತು, ಅಂಥ ಶಿಸ್ತು ಕ್ರಮವನ್ನು ಕೈಗೊಳ್ಳುವುದಕ್ಕೆ ಮುಂಚೆ, ಅಂಥ ಶಿಕ್ಷಕನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(3) ಶಿಕ್ಷಕನ ಕುಂದುಕೊರತೆಗಳೇನಾದರೂ ಇದ್ದರೆ, ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪರಿಹರಿಸತಕ್ಕದ್ದು.

**25. ವಿದ್ಯಾರ್ಥಿ-ಶಿಕ್ಷಕ ಅನುಪಾತ.-** ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳುಗಳೊಳಗೆ, ಸಮುಚಿತ ಸರ್ಕಾರವು ಮತ್ತು ಸ್ಥಳೀಯ ಪ್ರಾಧಿಕಾರವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ವಿದ್ಯಾರ್ಥಿ-ಶಿಕ್ಷಕ ಅನುಪಾತವು ಪ್ರತಿ ಶಾಲೆಯಲ್ಲೂ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) (1) ನೇ ಉಪ-ಪ್ರಕರಣದ ಮೇರೆಗೆ ವಿದ್ಯಾರ್ಥಿ-ಶಿಕ್ಷಕ ಅನುಪಾತದಂತೆ ನೋಡಿಕೊಳ್ಳುವ ಉದ್ದೇಶಕ್ಕಾಗಿ, ಒಂದು ಶಾಲೆಯಲ್ಲಿ ಸ್ಥಳ ನಿಯುಕ್ತಗೊಳಿಸಿರುವ ಯಾರೇ ಶಿಕ್ಷಕನನ್ನು, ಯಾವುದೇ ಇತರ ಶಾಲೆಯಲ್ಲಿ ಅಥವಾ ಕಚೇರಿಯಲ್ಲಿ ಸೇವೆ ಸಲ್ಲಿಸುವಂತೆ ಮಾಡತಕ್ಕದ್ದಲ್ಲ ಅಥವಾ 27ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವಂಥವುಗಳನ್ನು ಹೊರತುಪಡಿಸಿ, ಇತರ ಯಾವುದೇ ಶಿಕ್ಷಣೇತರ ಉದ್ದೇಶಕ್ಕಾಗಿ ನಿಯೋಜಿಸತಕ್ಕದ್ದಲ್ಲ.

**26. ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು.-** ಸಮುಚಿತ ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನೇರವಾಗಿ ಅಥವಾ ಪರೋಕ್ಷವಾಗಿ ಒದಗಿಸಿದ ನಿಧಿಗಳಿಂದ ಸ್ಥಾಪಿಸಿದ, ಅದು ಒಡೆತನ ಹೊಂದಿರುವ, ನಿಯಂತ್ರಣ ಹೊಂದಿರುವ ಅಥವಾ ಗಣನೀಯವಾಗಿ ಹಣಕಾಸು ನೆರವನ್ನು ಪಡೆದಿರುವ ಶಾಲೆಯ ಸಂಬಂಧದಲ್ಲಿ ನೇಮಕ ಪ್ರಾಧಿಕಾರವು, ತನ್ನ ನಿಯಂತ್ರಣದಲ್ಲಿರುವ ಶಾಲೆಯಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳು, ಮಂಜೂರಾದ ಶಿಕ್ಷಕರ ಒಟ್ಟು ಹುದ್ದೆಗಳ ಸಂಖ್ಯೆಯ ಶೇಕಡಾ ಹತ್ತರಷ್ಟನ್ನು ಮೀರದಂತೆ ಸುನಿಶ್ಚಿತಪಡಿಸಕೊಳ್ಳತಕ್ಕದ್ದು.

**27. ಶಿಕ್ಷಣೇತರ ಉದ್ದೇಶಗಳಿಗೆ ಶಿಕ್ಷಕರ ನಿಯೋಜನೆಯನ್ನು ನಿಷೇಧಿಸುವುದು.-** ಯಾರೇ ಶಿಕ್ಷಕನನ್ನು, ದಶವಾರ್ಷಿಕ ಜನಗಣತಿ, ವಿಪತ್ತು ಪರಿಹಾರ ಕರ್ತವ್ಯಗಳು ಅಥವಾ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರಕ್ಕೆ

ಅಥವಾ ರಾಜ್ಯ ವಿಧಾನ ಮಂಡಲಕ್ಕೆ ಅಥವಾ ಸಂಸತ್ತಿಗೆ ನಡೆಸುವ ಚುನಾವಣೆಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಹೊರತುಪಡಿಸಿ, ಯಾವುದೇ ಶಿಕ್ಷಣೇತರ ಉದ್ದೇಶಗಳಿಗೆ ನಿಯೋಜಿಸತಕ್ಕದ್ದಲ್ಲ.

28. ಶಿಕ್ಷಕರು ಖಾಸಗಿ ಪಾಠ ಮಾಡುವುದನ್ನು ನಿಷೇಧಿಸುವುದು.– ಯಾರೇ ಶಿಕ್ಷಕನು, ಖಾಸಗಿ ಪಾಠ ಮಾಡುವುದರಲ್ಲಿ ಅಥವಾ ಖಾಸಗಿ ಬೋಧನಾ ಚಟುವಟಿಕೆಯಲ್ಲಿ ಸ್ವತಃ ತೊಡಗತಕ್ಕದ್ದಲ್ಲ.

## ಅಧ್ಯಾಯ – V

## ಪ್ರಾಥಮಿಕ ಶಿಕ್ಷಣದ ಪಠ್ಯ ವಿಷಯ ಮತ್ತು ಅದನ್ನು ಪೂರ್ಣಗೊಳಿಸುವುದು

29. ಪಠ್ಯ ವಿಷಯ ಮತ್ತು ಮೌಲ್ಯಮಾಪನಾ ಪ್ರಕ್ರಿಯೆ.– (1) ಪ್ರಾಥಮಿಕ ಶಿಕ್ಷಣದ ಪಠ್ಯ ವಿಷಯವನ್ನು ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು, ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಶೈಕ್ಷಣಿಕ ಪ್ರಾಧಿಕಾರವು ಗೊತ್ತುಪಡಿಸತಕ್ಕದ್ದು.

(2) ಶೈಕ್ಷಣಿಕ ಪ್ರಾಧಿಕಾರವು, (1)ನೇ ಉಪ–ಪ್ರಕರಣದ ಮೇರೆಗೆ ಪಠ್ಯ ವಿಷಯವನ್ನು ಮತ್ತು ಮೌಲ್ಯಮಾಪನ ಪ್ರಕ್ರಿಯೆಯನ್ನು ಗೊತ್ತುಪಡಿಸುವಾಗ, ಈ ಮುಂದಿನವುಗಳನ್ನು ಪರಿಗಣಿಸತಕ್ಕದ್ದು, ಎಂದರೆ:–

(ಎ) ಸಂವಿಧಾನದಲ್ಲಿ ಹೇಳಿರುವ ಮೌಲ್ಯಗಳಿಗೆ ಅನುಗುಣವಾಗಿರುವುದು;

(ಬಿ) ಮಕ್ಕಳ ಸರ್ವಾಂಗೀಣ ಅಭಿವೃದ್ಧಿ;

(ಸಿ) ಮಕ್ಕಳ ಜ್ಞಾನ, ಸಾಮರ್ಥ್ಯ ಮತ್ತು ಪ್ರತಿಭೆಯ ವರ್ಧನೆ;

(ಡಿ) ಪೂರ್ಣ ಪ್ರಮಾಣದಲ್ಲಿ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯಗಳ ವಿಕಸನ;

(ಇ) ಮಗು ಸ್ನೇಹೀ ಮತ್ತು ಮಗು ಕೇಂದ್ರಿತ ವಾತಾವರಣದಲ್ಲಿ ಚಟುವಟಿಕೆಗಳು, ಶೋಧನೆ ಮತ್ತು ಅನ್ವೇಷಣೆ ಮೂಲಕ ಕಲಿಕೆ;

(ಎಫ್) ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು;

(ಜಿ) ಮಗುವಿನ ಭಯವನ್ನು, ಆಘಾತವನ್ನು ಹಾಗೂ ಆತಂಕವನ್ನು ಹೋಗಲಾಡಿಸುವುದು ಮತ್ತು ಮಗು ಮುಕ್ತವಾಗಿ ತನ್ನ ಅನಿಸಿಕೆಗಳನ್ನು ಹೇಳಿಕೊಳ್ಳುವುದಕ್ಕೆ ನೆರವಾಗುವುದು;

(ಎಚ್) ಮಗುವಿನ ಜ್ಞಾನದ ಗ್ರಹಿಕೆಯನ್ನು ಮತ್ತು ಅದನ್ನು ಅನ್ವಯಿಸುವುದಕ್ಕೆ ಆತ ಅಥವಾ ಆಕೆ ಹೊಂದಿರುವ ಸಾಮರ್ಥ್ಯವನ್ನು ಸಮಗ್ರವಾಗಿ ಹಾಗೂ ನಿರಂತರವಾಗಿ ಮೌಲ್ಯ ಮಾಪನ ಮಾಡುವುದು.

30. ಪರೀಕ್ಷೆ ಮತ್ತು ಶಿಕ್ಷಣ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರ.– (1) ಪ್ರಾಥಮಿಕ ಶಿಕ್ಷಣವು ಪೂರ್ಣಗೊಳ್ಳುವವರೆಗೆ ಯಾವುದೇ ಮಂಡಳಿಯ ಪರೀಕ್ಷೆಯಲ್ಲಿ ಉತ್ತೀರ್ಣವಾಗಬೇಕೆಂದು ಯಾವುದೇ ಮಗುವನ್ನು ಅಗತ್ಯಪಡಿಸತಕ್ಕದ್ದಲ್ಲ.

(2) ತನ್ನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿದ ಪ್ರತಿಯೊಂದು ಮಗುವಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

## ಅಧ್ಯಾಯ – VI

## ಮಗುವಿನ ಹಕ್ಕಿನ ರಕ್ಷಣೆ

31. **ಮಗುವಿನ ಶಿಕ್ಷಣ ಹಕ್ಕಿನ ಮೇಲ್ವಿಚಾರಣೆ.**– (1) ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮ, 2005 (2006ರ 4)ರ 3ನೇ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗವು ಅಥವಾ ಸಂದರ್ಭಾನುಸಾರ, 17ನೇ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗವು, ಆ ಅಧಿನಿಯಮದ ಮೇರೆಗೆ ಅವುಗಳಿಗೆ ವಹಿಸಿರುವ ಪ್ರಕಾರ್ಯಗಳ ಜೊತೆಗೆ, ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:–

(ಎ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಉಪಬಂಧಿಸಿರುವ ಹಕ್ಕುಗಳ ರಕ್ಷಣಾ ಕ್ರಮಗಳನ್ನು ಪರಿಶೀಲಿಸುವುದು ಮತ್ತು ಪುನರವಲೋಕಿಸುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮಗಳನ್ನು ಶಿಫಾರಸು ಮಾಡುವುದು;

(ಬಿ) ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಗುವಿಗೆ ಇರುವ ಹಕ್ಕಿಗೆ ಸಂಬಂಧಿಸಿದ ದೂರುಗಳನ್ನು ವಿಚಾರಣೆ ಮಾಡುವುದು; ಮತ್ತು

(ಸಿ) ಸದರಿ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮದ 15ನೇ ಮತ್ತು 24ನೇ ಪ್ರಕರಣಗಳ ಮೇರೆಗೆ ಉಪಬಂಧಿಸಿರುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು.

(2) ಸದರಿ ಆಯೋಗಗಳು, ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಗುವಿನ ಹಕ್ಕಿಗೆ ಸಂಬಂಧಿಸಿದ ಯಾವುವೇ ವಿಷಯಗಳನ್ನು ವಿಚಾರಣೆ ಮಾಡುವಾಗ, ಸದರಿ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಗಳ ಅಧಿನಿಯಮದ 14ನೇ ಮತ್ತು 24ನೇ ಪ್ರಕರಣಗಳ ಮೇರೆಗೆ ಅನುಕ್ರಮವಾಗಿ ಅವುಗಳಿಗೆ ವಹಿಸಿಕೊಟ್ಟಿರುವಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು.

(3) ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗವು ರಾಜ್ಯದಲ್ಲಿ ಸ್ಥಾಪನೆಯಾಗಿಲ್ಲದಿರುವಲ್ಲಿ, ಸಮುಚಿತ ಸರ್ಕಾರವು, (1)ನೇ ಉಪ ಪ್ರಕರಣದ (ಎ) ಯಿಂದ (ಸಿ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳಿಗೆ ಹಾಗೂ ಷರತ್ತುಗಳಿಗೆ ಒಳಪಟ್ಟು ಅಂಥ ಪ್ರಾಧಿಕಾರವನ್ನು ರಚಿಸಬಹುದು.

32. **ಕುಂದುಕೊರತೆಗಳ ನಿವಾರಣೆ.**– (1) 31ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಮಗುವಿನ ಹಕ್ಕಿಗೆ ಸಂಬಂಧಿಸಿದ ಯಾವುದೇ ಕುಂದುಕೊರತೆ ಹೊಂದಿರುವ ಯಾರೇ ವ್ಯಕ್ತಿಯು, ಅಧಿಕಾರ ವ್ಯಾಪ್ತಿ ಹೊಂದಿರುವ ಸ್ಥಳೀಯ ಪ್ರಾಧಿಕಾರಕ್ಕೆ ಲಿಖಿತ ದೂರನ್ನು ಸಲ್ಲಿಸಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ದೂರನ್ನು ಸ್ವೀಕರಿಸಿದ ತರುವಾಯ, ಸ್ಥಳೀಯ ಪ್ರಾಧಿಕಾರವು, ಸಂಬಂಧಪಟ್ಟ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯ ಮೂರು ತಿಂಗಳುಗಳೊಳಗೆ ಆ ವಿಷಯವನ್ನು ತೀರ್ಮಾನಿಸತಕ್ಕದ್ದು.

(3) ಸ್ಥಳೀಯ ಪ್ರಾಧಿಕಾರದ ತೀರ್ಮಾನದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಅಥವಾ 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(4) (3)ನೇ ಉಪ–ಪ್ರಕರಣದ ಮೇರೆಗೆ ಸಲ್ಲಿಸಿದ ಅಪೀಲನ್ನು, ಸಂದರ್ಭಾನುಸಾರ, ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗವು ಅಥವಾ 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ನಿಯಮಿಸಿದ ಪ್ರಾಧಿಕಾರವು, 31ನೇ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಮೇರೆಗೆ ಉಪಬಂಧಿಸಲಾದಂತೆ ತೀರ್ಮಾನಿಸತಕ್ಕದ್ದು.

**33. ರಾಷ್ಟ್ರೀಯ ಸಲಹಾ ಪರಿಷತ್ತಿನ ರಚನೆ.–** (1) ಕೇಂದ್ರ ಸರ್ಕಾರವು, ಪ್ರಾಥಮಿಕ ಶಿಕ್ಷಣ ಮತ್ತು ಮಗುವಿನ ಬೆಳವಣಿಗೆಯ ಕ್ಷೇತ್ರದಲ್ಲಿ ಜ್ಞಾನವನ್ನು ಮತ್ತು ಪ್ರಾಯೋಗಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿ ಕೇಂದ್ರ ಸರ್ಕಾರವು ನೇಮಿಸುವುದು ಅಗತ್ಯವೆಂದು ಭಾವಿಸಬಹುದಾದಂತೆ ಹದಿನೈದಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡ ಒಂದು ರಾಷ್ಟ್ರೀಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು ರಾಷ್ಟ್ರೀಯ ಸಲಹಾ ಪರಿಷತ್ತಿನ ಪ್ರಕಾರ್ಯಗಳಾಗಿರತಕ್ಕದ್ದು.

(3) ರಾಷ್ಟ್ರೀಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕದ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**34. ರಾಜ್ಯ ಸಲಹಾ ಪರಿಷತ್ತಿನ ರಚನೆ.–** (1) ರಾಜ್ಯ ಸರ್ಕಾರವು, ಪ್ರಾಥಮಿಕ ಶಿಕ್ಷಣ ಮತ್ತು ಮಗುವಿನ ಬೆಳವಣಿಗೆಯ ಕ್ಷೇತ್ರದಲ್ಲಿ ಜ್ಞಾನವನ್ನು ಮತ್ತು ಪ್ರಾಯೋಗಿಕ ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿ ರಾಜ್ಯ ಸರ್ಕಾರವು ನೇಮಿಸುವುದು, ಅಗತ್ಯವೆಂದು ಭಾವಿಸಬಹುದಾದಂತೆ ಹದಿನೈದಕ್ಕೆ ಮೀರದಷ್ಟು ಸಂಖ್ಯೆಯ ಸದಸ್ಯರನ್ನು ಒಳಗೊಂಡ ಒಂದು ರಾಜ್ಯ ಸಲಹಾ ಪರಿಷತ್ತನ್ನು ಅಧಿಸೂಚನೆಯ ಮೂಲಕ ರಚಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು ರಾಜ್ಯ ಸಲಹಾ ಪರಿಷತ್ತಿನ ಪ್ರಕಾರ್ಯಗಳಾಗಿರತಕ್ಕದ್ದು.

(3) ರಾಜ್ಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕದ ಇತರ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ – VII

## ಸಂಕೀರ್ಣ

35. ನಿರ್ದೇಶನಗಳನ್ನು ನೀಡಲು ಅಧಿಕಾರ.– (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಗದರ್ಶಿ ಸೂತ್ರಗಳನ್ನು ಸಮುಚಿತ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರಕ್ಕೆ ನೀಡಬಹುದು.

(2) ಸಮುಚಿತ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಶಾಲಾ ಆಡಳಿತ ಸಮಿತಿಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು.

(3) ಸ್ಥಳೀಯ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಶಾಲಾ ಆಡಳಿತ ಸಮಿತಿಗೆ ತಾನು ಸೂಕ್ತವೆಂದು ಭಾವಿಸುವಂತಹ ಮಾರ್ಗದರ್ಶಕ ಸೂತ್ರಗಳನ್ನು ಹೊರಡಿಸಬಹುದು ಮತ್ತು ನಿರ್ದೇಶನಗಳನ್ನು ನೀಡಬಹುದು.

36. **ಪ್ರಾಸಿಕ್ಯೂಷನ್ ಹೂಡಲು ಪೂರ್ವ ಮಂಜೂರಾತಿ.–** 13ನೇ ಪ್ರಕರಣದ (2)ನೇ ಉಪ–ಪ್ರಕರಣ, 18ನೇ ಪ್ರಕರಣದ (5)ನೇ ಉಪ–ಪ್ರಕರಣ ಮತ್ತು 19ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ದಂಡನೀಯ ಅಪರಾಧಗಳಿಗಾಗಿ, ಈ ಸಂಬಂಧದಲ್ಲಿ ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಿದ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆದ ಹೊರತು, ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

37. **ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮಗಳ ಅಥವಾ ಆದೇಶದ ಅನುಸಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ರಾಷ್ಟ್ರೀಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗದ, ರಾಜ್ಯ ಮಗುವಿನ ಹಕ್ಕುಗಳ ರಕ್ಷಣಾ ಆಯೋಗದ, ಸ್ಥಳೀಯ ಪ್ರಾಧಿಕಾರದ, ಶಾಲಾ ಆಡಳಿತ ಸಮಿತಿಯ ಅಥವಾ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

38. **ನಿಯಮಗಳನ್ನು ರಚಿಸಲು ಸಮುಚಿತ ಸರ್ಕಾರದ ಅಧಿಕಾರ.–** (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ ಮೊದಲನೇ ಪರಂತುಕದ ಮೇರೆಗೆ ವಿಶೇಷ ತರಬೇತಿಯನ್ನು ನೀಡುವ ರೀತಿ ಮತ್ತು ಅದರ ಕಾಲಮಿತಿ;

(ಬಿ) 6ನೇ ಪ್ರಕರಣದ ಮೇರೆಗೆ ಹತ್ತಿರದ ಶಾಲೆಯ ಸ್ಥಾಪನೆಗಾಗಿ ಪ್ರದೇಶ ಅಥವಾ ಪರಿಮಿತಿಗಳು;

(ಸಿ) 9ನೇ ಪ್ರಕರಣದ (ಡಿ) ಖಂಡದ ಮೇರೆಗೆ ಹದಿನಾಲ್ಕು ವರ್ಷ ವಯಸ್ಸಿನವರೆಗಿನ ಮಕ್ಕಳ ದಾಖಲೆಗಳ ನಿರ್ವಹಣೆಯ ರೀತಿ;

(ಡಿ) 12ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ವೆಚ್ಚವನ್ನು ತುಂಬಿಕೊಡುವ ರೀತಿ ಮತ್ತು ಅದರ ಪ್ರಮಾಣ;

(ಇ) 14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಮಗುವಿನ ವಯಸ್ಸನ್ನು ನಿರ್ಧರಿಸುವುದಕ್ಕೆ ಸಂಬಂಧಿಸಿದ ಯಾವುದೇ ಇತರ ದಸ್ತಾವೇಜು;

(ಎಫ್) 15ನೇ ಪ್ರಕರಣದ ಮೇರೆಗೆ ಶಾಲೆಗೆ ಸೇರಿಸಲು ವಿಸ್ತರಿಸಿದ ಅವಧಿ ಮತ್ತು ಹಾಗೆ ವಿಸ್ತರಿಸಿದ ಅವಧಿಯ ತರುವಾಯ ಶಾಲೆಗೆ ಸೇರಿಸಿದ್ದರೆ ವ್ಯಾಸಂಗವನ್ನು ಪೂರ್ಣಗೊಳಿಸುವ ರೀತಿ;

(ಜಿ) 18ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತಾ ಪ್ರಮಾಣ ಪತ್ರಕ್ಕಾಗಿ ಯಾವ ಪ್ರಾಧಿಕಾರಕ್ಕೆ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಬೇಕೋ, ಆ ಪ್ರಾಧಿಕಾರ, ಆ ನಮೂನೆ ಮತ್ತು ಆ ರೀತಿ;

(ಎಚ್) 18ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಮಾನ್ಯತಾ ಪ್ರಮಾಣಪತ್ರವನ್ನು ನೀಡುವುದಕ್ಕೆ ಸಂಬಂಧಿಸಿದ ನಮೂನೆ, ಅವಧಿ, ರೀತಿ ಮತ್ತು ಷರತ್ತುಗಳು;

(ಐ) 18ನೇ ಪ್ರಕರಣದ (3)ನೇ ಉಪ–ಪ್ರಕರಣದ ಎರಡನೇ ಪರಂತುಕದ ಮೇರೆಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡುವ ರೀತಿ;

(ಜೆ) 21ನೇ ಪ್ರಕರಣದ (2)ನೇ ಉಪ–ಪ್ರಕರಣದ (ಡಿ) ಖಂಡದ ಮೇರೆಗೆ ಶಾಲಾ ಆಡಳಿತ ಸಮಿತಿಯು ನಿರ್ವಹಿಸಬೇಕಾದ ಇತರ ಪ್ರಕಾರ್ಯಗಳು;

(ಕೆ) 22ನೇ ಪ್ರಕರಣದ (1) ನೇ ಉಪ–ಪ್ರಕರಣದ ಮೇರೆಗೆ ಶಾಲಾ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ರೀತಿ;

(ಎಲ್) 23ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಶಿಕ್ಷಕನಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು;

(ಎಂ) 24ನೇ ಪ್ರಕರಣದ (1)ನೇ ಉಪ–ಪ್ರಕರಣದ (ಎಫ್) ಖಂಡದ ಮೇರೆಗೆ ಶಿಕ್ಷಕನು ನಿರ್ವಹಿಸಬೇಕಾದ ಕರ್ತವ್ಯಗಳು;

(ಎನ್) 24ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ಶಿಕ್ಷಕರ ಕುಂದುಕೊರತೆಗಳನ್ನು ಪರಿಹರಿಸುವ ರೀತಿ;

(ಒ) 30ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಿರುವುದಕ್ಕೆ ನೀಡುವ ಪ್ರಮಾಣಪತ್ರದ ನಮೂನೆ ಮತ್ತು ರೀತಿ;

(ಪಿ) 31ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗಿನ ಪ್ರಾಧಿಕಾರ, ಅದನ್ನು ರಚಿಸುವ ರೀತಿ ಹಾಗೂ ಅದರ ನಿಬಂಧನೆಗಳು ಮತ್ತು ಷರತ್ತುಗಳು;

(ಕ್ಯೂ) 33ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೇರೆಗೆ ರಾಷ್ಟ್ರೀಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕದ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಆರ್) 34ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಸಲಹಾ ಪರಿಷತ್ತಿನ ಸದಸ್ಯರ ಭತ್ಯೆಗಳು ಹಾಗೂ ನೇಮಕದ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(3) ಕೇಂದ್ರ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 20 ಮತ್ತು 23ನೇ ಪ್ರಕರಣಗಳ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಯಾವುದೇ ನಿಯಮವನ್ನು ಅಥವಾ ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಮುಂದೆ ಇಡತಕ್ಕದ್ದು.

## ಅನುಸೂಚಿ

**(19 ಮತ್ತು 25ನೇ ಪ್ರಕರಣಗಳನ್ನು ನೋಡಿ)**

**ಶಾಲೆಗಾಗಿ ಪ್ರಮಾಣಕಗಳು ಮತ್ತು ಗುಣಮಟ್ಟಗಳು**

| ಕ್ರಮ ಸಂಖ್ಯೆ | ಬಾಬು | ಪ್ರಮಾಣಕಗಳು ಮತ್ತು ಗುಣಮಟ್ಟಗಳು | |
|---|---|---|---|
| 1. | ಶಿಕ್ಷಕರ ಸಂಖ್ಯೆ:<br>(ಎ) ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ | ಸೇರಿಸಿಕೊಳ್ಳಲಾದ ಮಕ್ಕಳು | ಶಿಕ್ಷಕರ ಸಂಖ್ಯೆ |
| | | ಅರವತ್ತರವರೆಗೆ | ಎರಡು |
| | | ಅರವತ್ತೊಂದರಿಂದ ತೊಂಬತ್ತು | ಮೂರು |
| | | ತೊಂಬತ್ತೊಂದರಿಂದ ನೂರಾ ಇಪ್ಪತ್ತು | ನಾಲ್ಕು |
| | | ನೂರ ಇಪ್ಪತ್ತೊಂದರಿಂದ ಇನ್ನೂರು | ಐದು |

| ಕ್ರಮ ಸಂಖ್ಯೆ | ಬಾಬು | ಪ್ರಮಾಣಕಗಳು ಮತ್ತು ಗುಣಮಟ್ಟಗಳು | |
|---|---|---|---|
| | | ನೂರೈವತ್ತು ಮಕ್ಕಳಿಗೂ ಮೇಲ್ಪಟ್ಟು | ಐದು ಮತ್ತು ಒಬ್ಬ ಮುಖ್ಯ ಶಿಕ್ಷಕ |
| | | ಇನ್ನೂರು ಮಕ್ಕಳಿಗೂ ಮೇಲ್ಪಟ್ಟು | ವಿದ್ಯಾರ್ಥಿ – ಶಿಕ್ಷಕ ಅನುಪಾತವು (ಮುಖ್ಯ ಶಿಕ್ಷಕನನ್ನು ಹೊರತುಪಡಿಸಿ) ನಲವತ್ತು ಮೀರತಕ್ಕದ್ದಲ್ಲ. |
| | (ಬಿ) ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ | (1) | ಪ್ರತಿಯೊಂದು ತರಗತಿಗೆ ಕಡೇ ಪಕ್ಷ ಒಬ್ಬ ಶಿಕ್ಷಕ. ಹೀಗಾಗಿ ಈ ಕೆಳಕಂಡ ಪ್ರತಿಯೊಂದು ವಿಭಾಗದಲ್ಲಿ ಕಡೇ ಪಕ್ಷ ಒಬ್ಬ ಶಿಕ್ಷಕನಿರತಕ್ಕದ್ದು. |
| | | | (i) ವಿಜ್ಞಾನ ಮತ್ತು ಗಣಿತ |
| | | | (ii) ಸಮಾಜ ಶಾಸ್ತ್ರ |
| | | | (iii) ಭಾಷೆಗಳು |
| | | (2) | ಪ್ರತಿ ಮೂವತ್ತೈದು ಮಕ್ಕಳಿಗೆ ಕಡೇ ಪಕ್ಷ ಒಬ್ಬ ಶಿಕ್ಷಕ. |
| | | (3) | ಶಾಲೆಗೆ ಸೇರುವ ಮಕ್ಕಳ ಸಂಖ್ಯೆಯು ಒಂದು ನೂರಕ್ಕೂ ಮೇಲ್ಪಟ್ಟಿದ್ದರೆ; |
| | | | (i) ಒಬ್ಬ ಪೂರ್ಣಕಾಲಿಕ ಮುಖ್ಯ ಶಿಕ್ಷಕ; |
| | | | (ii) ಈ ಕೆಳಕಂಡ ವಿಭಾಗಗಳಿಗೆ ಅರೆಕಾಲಿಕ ಶಿಕ್ಷಕರು.– |
| | | | (ಎ) ಕಲಾ ಶಿಕ್ಷಣ; |
| | | | (ಬಿ) ಆರೋಗ್ಯ ಮತ್ತು ದೈಹಿಕ ಶಿಕ್ಷಣ; |
| | | | (ಸಿ) ದೈಹಿಕ ಶಿಕ್ಷಣ; |
| 2. | ಕಟ್ಟಡ | | ಸರ್ವಋತು ಕಟ್ಟಡವು ಈ ಮುಂದಿನವುಗಳನ್ನು ಒಳಗೊಂಡಿರುತ್ತದೆ. |
| | | (i) | ಪ್ರತಿಯೊಬ್ಬ ಶಿಕ್ಷಕನಿಗೆ ಕಡೇ ಪಕ್ಷ ಒಂದು ತರಗತಿ ಕೊಠಡಿ ಮತ್ತು ಕಚೇರಿ ಹಾಗೂ – ಉಗ್ರಾಣ – ಹಾಗೂ – ಮುಖ್ಯೋಪಾಧ್ಯಾಯರ ಕೊಠಡಿ; |
| | | (ii) | ತಡೆ ಮುಕ್ತ ಪ್ರವೇಶ ಮಾರ್ಗ; |
| | | (iii) | ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳು; |

| ಕ್ರಮ ಸಂಖ್ಯೆ | ಬಾಬು | | ಪ್ರಮಾಣಕಗಳು ಮತ್ತು ಗುಣಮಟ್ಟಗಳು |
|---|---|---|---|
| | | (iv) | ಎಲ್ಲ ಮಕ್ಕಳಿಗೂ ಸುರಕ್ಷಿತ ಮತ್ತು ಸಾಕಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನ ಸೌಲಭ್ಯ; |
| | | (v) | ಮಧ್ಯಾಹ್ನದ ಬಿಸಿ ಊಟ ತಯಾರಿಸುತ್ತಿರುವ ಶಾಲೆಯಲ್ಲಿ ಒಂದು ಅಡುಗೆ ಮನೆ; |
| | | (vi) | ಆಟದ ಮೈದಾನ; |
| | | (vii) | ಸುತ್ತಲೂ ಗೋಡೆಯಿಂದ ಅಥವಾ ಮುಳ್ಳುತಂತಿ ಬೇಲಿಯಿಂದ ಶಾಲಾ ಕಟ್ಟಡವನ್ನು ರಕ್ಷಿಸುವ ವ್ಯವಸ್ಥೆಗಳು. |
| 3. | ಒಂದು ಶೈಕ್ಷಣಿಕ ವರ್ಷದಲ್ಲಿ ಕೆಲಸದ ದಿನಗಳ / ಬೋಧನೆಯ ಗಂಟೆಗಳ ಕನಿಷ್ಠ ಸಂಖ್ಯೆ | | (i) ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಎರಡು ನೂರು ಕೆಲಸದ ದಿನಗಳು; |
| | | | (ii) ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಎರಡು ನೂರ ಇಪ್ಪತ್ತು ಕೆಲಸದ ದಿನಗಳು; |
| | | | (iii) ಒಂದನೇ ತರಗತಿಯಿಂದ ಐದನೇ ತರಗತಿಯವರೆಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಎಂಟು ನೂರು ಬೋಧನಾ ಗಂಟೆಗಳು; |
| | | | (iv) ಆರನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ ಒಂದು ಸಾವಿರ ಬೋಧನಾ ಗಂಟೆಗಳು. |
| 4. | ಶಿಕ್ಷಕನಿಗೆ ಪ್ರತಿವಾರ ಕನಿಷ್ಠ ಕೆಲಸದ ಗಂಟೆಗಳ ಸಂಖ್ಯೆ | | ಸಿದ್ಧತೆಯನ್ನು ಒಳಗೊಂಡಂತೆ ನಲವತ್ತೈದು ಬೋಧನಾ ಗಂಟೆಗಳು. |
| 5. | ಬೋಧನಾ-ಕಲಿಕೆ ಉಪಕರಣ | | ಪ್ರತಿಯೊಂದು ತರಗತಿಗೂ ಅಗತ್ಯವಿರುವಷ್ಟನ್ನು ಒದಗಿಸತಕ್ಕದ್ದು. |
| 6. | ಗ್ರಂಥಾಲಯ | | ಪ್ರತಿಯೊಂದು ಶಾಲೆಯಲ್ಲಿ ವೃತ್ತ ಪತ್ರಿಕೆ, ನಿಯತಕಾಲಿಕೆಗಳು ಮತ್ತು ಕಥೆ ಪುಸ್ತಕಗಳನ್ನೊಳಗೊಂಡಂತೆ ಎಲ್ಲ ವಿಷಯಗಳನ್ನು ಕುರಿತಾದ ಪುಸ್ತಕಗಳನ್ನು ಒದಗಿಸುವ ಒಂದು ಗ್ರಂಥಾಲಯವಿರಬೇಕು. |
| 7. | ಆಟದ ಸಾಮಗ್ರಿ, ಆಟಗಳು ಮತ್ತು ಕ್ರೀಡಾ ಉಪಕರಣಗಳು. | | ಪ್ರತಿಯೊಂದು ತರಗತಿಗೂ ಅಗತ್ಯವಿರುವಷ್ಟನ್ನು ಒದಗಿಸತಕ್ಕದ್ದು. |

ವಿ.ಕೆ. ಭಸೀನ್
ಕಾರ್ಯದರ್ಶಿ
ಭಾರತ ಸರ್ಕಾರ

* * * * *

ಮುದ್ರಕರು: ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು. (ಕಾ.ಸೂ. ಪಿ-೮, ೨, ೧೦೦ ಪ್ರತಿ ಪಿ-3)